# ಶಿವರಾಮ ಕಾರಂತರ ರಂಗಪ್ರಯೋಗಗಳು

**ಮಮತಾ ಎಮ್.***

**DOI: https://doi.org/10.5281/zenodo.22106698**

**ABSTRACT**

ಕನ್ನಡ ಸಾಹಿತ್ಯ ಮತ್ತು ರಂಗಭೂಮಿಯ ಕ್ಷೇತ್ರದಲ್ಲಿ ವಿಶಿಷ್ಟವಾದ ಛಾಪು ಮೂಡಿಸಿದ ಶಿವರಾಮ ಕಾರಂತರು ಬಹುಮುಖ ಪ್ರತಿಭೆಯ ಸೃಜನಶೀಲ ವ್ಯಕ್ತಿತ್ವದವರು. ಕಾದಂಬರಿ, ನಾಟಕ, ಯಕ್ಷಗಾನ, ಚಿತ್ರಕಲೆ, ಸಂಗೀತ, ನೃತ್ಯ ಹಾಗೂ ರಂಗಭೂಮಿ ಮೊದಲಾದ ವಿವಿಧ ಕ್ಷೇತ್ರಗಳಲ್ಲಿ ತಮ್ಮದೇ ಆದ ಪ್ರಯೋಗಶೀಲತೆಯನ್ನು ಮೆರೆದವರು. ಕನ್ನಡ ರಂಗಭೂಮಿಯ ಆಧುನಿಕ ಬೆಳವಣಿಗೆಗೆ ಮಹತ್ವದ ಕೊಡುಗೆ ನೀಡಿದ ಇವರ ರಂಗಚಿಂತನೆ ಕೇವಲ ನಾಟಕ ರಚನೆಗೆ ಸೀಮಿತವಾಗಿರದೆ, ಗೀತನಾಟಕ, ನೃತ್ಯ ರೂಪಕ ಮತ್ತು ಯಕ್ಷಗಾನದ ಬಗ್ಗೆ ಒಲವು ತೋರಿದವರು. ಈ ಸಂಶೋಧನಾ ಪ್ರಬಂದವು ಶಿವರಾಮ ಕಾರಂತರ ರಂಗಭೂಮಿಯ ಕುರಿತ ಚಿಂತನೆ ಮತ್ತು ಅವರ ವಿವಿಧ ರಂಗಪ್ರಯೋಗಗಳನ್ನು ಕೇಂದ್ರವಾಗಿರಿಸಿಕೊಂಡಿದೆ. ಸಾಂಪ್ರದಾಯಿಕ ರಂಗಭೂಮಿಯ ಮಿತಿಗಳನ್ನು ಮೀರಿ ಹೊಸ ರಂಗಭಾಷೆಯನ್ನು ರೂಪಿಸುವಲ್ಲಿ ಕಾರಂತರು ಕೈಗೊಂಡ ಪ್ರಯತ್ನಗಳನ್ನು ಇಲ್ಲಿ ವಿಶ್ಲೇಷಿಸಲಾಗುವುದು. ರಂಗಭೂಮಿಯು ಜನಸಾಮಾನ್ಯರೊಂದಿಗೆ ನೇರ ಸಂವಹನ ನಡೆಸುವ ಜೀವಂತ ಕಲಾಮಾಧ್ಯಮವಾಗಬೇಕು ಎಂಬ ಕಾರಂತರ ನಿಲುವು ಅವರ ರಂಗಪ್ರಯೋಗಗಳ ಪ್ರಮುಖ ಆಶಯವಾಗಿದೆ.

**KEYWORDS:** ಶಿವರಾಮ ಕಾರಂತ, ಕನ್ನಡ ರಂಗಭೂಮಿ, ನಾಟಕ, ಗೀತನಾಟಕ, ರಂಗಪ್ರಯೋಗ, ಯಕ್ಷಗಾನ, ಅಭಿನಯ, ಆಧುನಿಕ ರಂಗಭೂಮಿ.

* **ಮಮತಾ ಎಮ್.,** ಉಪನ್ಯಾಸಕರು, ಮಿಲಾಗ್ರಿಸ್ ಕಾಲೇಜು, ಮಂಗಳೂರು.

'ಕಾವ್ಯೇಷು ನಾಟಕಂ ರಮ್ಯಂ' ಎಂಬುದು ಭರತ ಮುನಿಯ ಪ್ರಸಿದ್ಧವಾದ ಮಾತು. ಸಾಹಿತ್ಯದ ಪ್ರಕಾರಗಳಲ್ಲಿ ನಾಟಕಕ್ಕೆ ಅತ್ಯಂತ ವಿಶೇಷವಾದ ಸ್ಥಾನವಿದೆ. ನಾಟಕವನ್ನು ಓದುವ ಕೃತಿಯಾಗಿಯೇ ಪರಿಭಾವಿಸಲಾಗಿತ್ತು. ಆದರೆ ರಂಗದ ಮೇಲೆ ನಾಟಕ ಪ್ರದರ್ಶನಗೊಳ್ಳಲು ಆರಂಭಿಸಿದ ನಂತರ ನಾಟಕ ಸಾಹಿತ್ಯಕ್ಕೆ ವಿಶೇಷ ಮಾನ್ಯತೆ ದೊರೆಯಿತು. ಶಿಷ್ಟ ಸಾಹಿತ್ಯದ ಒಂದು ಪ್ರಾಕಾರವಾಗಿ, ಅಭಿನಯದ ಮೂಲಕ ರಂಗದಲ್ಲಿ ಪ್ರದರ್ಶನಗೊಂಡಿತು. ಜೊತೆಗೆ ಜನಪದ ರಂಗರೂಪಗಳಾದ ಯಕ್ಷಗಾನ, ಬಯಲಾಟ ಹಾಗೂ ಪಾಶ್ಚಾತ್ಯ ನಾಟಕಗಳೂ ಕನ್ನಡ ನಾಟಕದ ಬೆಳವಣಿಗೆಗೆ ಮಹತ್ವದ ಪ್ರೇರಣೆಯಾಗಿವೆ.

ಕನ್ನಡದಲ್ಲಿ ನಾಟಕ ಪ್ರಕಾರ ಬೆಳೆದಂತೆ ಅದರಲ್ಲಿ ಪರಿವರ್ತನೆಗಳು ನಿರಂತರವಾಗಿ ಸಾಗುತ್ತಿದ್ದವು. ಅದು ರಂಗದಲ್ಲಿ ಪ್ರದರ್ಶನಗೊಂಡು ಕಾಲಕ್ಕೆ ತಕ್ಕಂತೆ, ಜನರ ಬೇಡಿಕೆಗಳಿಗೆ ತಕ್ಕ ಹಾಗೆ ಪ್ರಯೋಗಗಳು ನಡೆದವು. ಇಂತಹ ಪ್ರಯೋಗಗಳನ್ನು ಮಾಡಿದವರಲ್ಲಿ ಅಗ್ರಗಣ್ಯರು ಕಡಲತಡಿಯ ಭಾರ್ಗವ ಡಾ. ಶಿವರಾಮ ಕಾರಂತರು. ಅವರು ತಮ್ಮ 'ಗೀತನಾಟಕ'ಗಳಿಗೆ ಬರೆದ ಮುನ್ನುಡಿಯಲ್ಲಿ 'ನಾಟಕ ಇರುವುದು ಓದುವುದಕ್ಕಲ್ಲ, ರಂಗದ ಮೇಲೆ ಪ್ರದರ್ಶಿಸುವುದಕ್ಕೆ' ಎಂದು ಮೊದಲು ಪ್ರತಿಪಾದಿಸಿದ್ದರು. ಆದ್ದರಿಂದ ಕಾರಂತರು ಸಾಹಿತ್ಯದ ಒಂದೇ ಪ್ರಾಕಾರಕ್ಕೆ ಜೋತು ಬೀಳದೆ ನಾಟಕ, ಯಕ್ಷಗಾನ, ಗೀತಾನಾಟಕ, ನೃತ್ಯ ನಾಟಕಗಳಲ್ಲಿ ಹೊಸತನವನ್ನು ತುಂಬಿದರು. ಕಾರಂತರ ರಂಗಪ್ರಯೋಗಗಳು ಕೇವಲ ಒಂದು ಪ್ರಯೋಗವಾಗಿ ಉಳಿಯಲಿಲ್ಲ. ಬದಲಾಗಿ ರಂಗಭೂಮಿಯಲ್ಲಿ ಹೊಸತನದ ಗುರುತನ್ನು ಮೂಡಿಸಿಬಿಟ್ಟಿತು. ಹೀಗಾಗಿಯೇ ರಂಗಪ್ರಯೋಗ ಎಂದಾಗ ನಮಗೆ ಕಾರಂತರೇ ನೆನಪಾಗುತ್ತಾರೆ.

**ನಾಟಕ:**

ಕಾರಂತರ ಪ್ರತಿಭೆ ನಿಂತ ನೀರಾಗಿರಲಿಲ್ಲ. ಹಂತಹಂತವಾಗಿ ಹೊಸತನವನ್ನು ಹುಡುಕುತ್ತಾ ಅವರು ತಮ್ಮನ್ನು ತಾವೇ ಮೀರುತ್ತಾ ಮುಂದುವರಿದವರು. ಪತ್ರಿಕಾ ವ್ಯವಸಾಯದಲ್ಲಿ ತೊಡಗಿ ಅಲ್ಲಿಂದ ಬರವಣಿಗೆಗಳ ಮೂಲಕ ಓದುಗರನ್ನು ತಲುಪಿದವರು. ಕಾರಂತರು ಕಾದಂಬರಿಗಳ ಮೂಲಕ ಸಾಮಾಜಿಕ ಸ್ತರವನ್ನು ಮುಟ್ಟಿದ್ದರು. ರಂಗಭೂಮಿಯ ಮೋಹ ಅಂಟಿದ್ದರಿಂದ ತಮ್ಮ ಅನಿಸಿಕೆಗಳನ್ನು ತುಂಬುವುದಕ್ಕೆ ನಾಟಕ ಆಕರ್ಷಕವಾದ ಒಂದು ಮಾಧ್ಯಮ ಎಂಬ ಕಾರಣಕ್ಕೆ ನಾಟಕದತ್ತ ಕಾರಂತರ ಒಲವು ಮೂಡಿತು. ಸರಿ ಸುಮಾರು ಹತ್ತು ವರ್ಷಗಳ ಕಾಲ ನಾಟಕದಲ್ಲಿ ಕೃಷಿ ಮಾಡಿದ್ದರು. ಅದರಲ್ಲಿ ಪ್ರಮುಖವಾದ ನಾಟಕಗಳು ಗರ್ಭಗುಡಿ, ಕಟ್ಟೆಪುರಾಣ, ಸೋಮಿಯ ಸೌಭಾಗ್ಯ, ಕಿಸಾಗೋತಾಮಿ, ಗೆದ್ದವರ ಸಂಖ್ಯೆ, ಬೆವರಿಗೆ ಜಯವಾಗಲಿ, ನಿಮ್ಮ ಓಟು ಯಾರಿಗೆ ಇತ್ಯಾದಿ. ಅವರಲ್ಲಿ ನಾಟಕದ ಕುರಿತಾದ ತಲ್ಲೀನತೆ ಎಷ್ಟಿತ್ತೆಂದರೆ ಆ ಕಾಲಕ್ಕೆ ಒಂದು ಐದಂಕದ ಗದ್ಯನಾಟಕವನ್ನು ಕೆಲವೇ ದಿನಗಳಲ್ಲಿ ಬರೆಯುತ್ತಿದ್ದರಂತೆ.

ಶಿವರಾಮ ಕಾರಂತರು ನಾಟಕಕ್ಕಾಗಿ ನಾಟಕ ಬರೆದವರಲ್ಲ. ಸಮಾಜ ಸುಧಾರಣೆಯ ಕನಸು ಹೊತ್ತಿದ್ದವರು. ಸಾಹಿತ್ಯ ಕೃಷಿಯ ಮೂಲಕ ಹೇಗಾದರೂ ಸಮಾಜಸುಧಾರಣೆಯನ್ನು ಮಾಡಲೇಬೇಕೆಂಬ ಹುಚ್ಚು ಅವರಲ್ಲಿತ್ತು. ಅದು ಎಷ್ಟೊಂದು ತೀವ್ರವಾಗಿತ್ತೆಂದರೆ, ವ್ಯವಸಾಯ ನಾಟಕಮಂಡಳಿಗಳಿಂದ ಅವರ ನಾಟಕಗಳನ್ನು ರಂಗಸ್ಥಳಕ್ಕೆ ತರಬಲ್ಲ ಸಾಧ್ಯತೆ ಕಣ್ಮರೆಯಾದಾಗ ಅವರೇ ಒಂದು ನಾಟಕ ಮಂಡಳಿಯನ್ನು ಕಟ್ಟಿದರೇನು? ಎಂಬ ಜಿದ್ದಿನ ತನಕವೂ ಹೋಗಿತ್ತು. ಸಮಾಜ ಸುಧಾರಣೆಯನ್ನು ತಾನು ಯಾವುದರ ಮೂಲಕ ಮಾಡಬೇಕು ಎಂಬ ಪ್ರಶ್ನೆ

ಅವರನ್ನು ನಿರಂತರವಾಗಿ ಕಾಡುತ್ತಿತ್ತು. ನಾಟಕದ ಮೂಲಕ ತಾನು ಸಮಾಜದ ಯಾವ ದುರ್ಗುಣಗಳನ್ನು ಖಂಡಿಸಬೇಕಿತ್ತೋ ಅದಕ್ಕೆ ದಾಸರಾದ ನಟ ವರ್ಗದಿಂದ ಮಾಡುವ ಪರಿಸ್ಥಿತಿ ಬಂದಾಗ ಚಿಂತೆಗೀಡಾಗಿದ್ದರು. ತಾನು ಸೃಷ್ಟಿಸುವ ನಾಟಕ ಮಂಡಳಿ ಅಪ್ಪಟ ಗಾಂಧಿ ತತ್ವವನ್ನು ಅನುಸರಿಸುವವರೇ ಆಗಬೇಕೆಂಬ ಇರಾದೆ ಕಾರಂತರಲ್ಲಿ ಇತ್ತು. ಸಹಾಯಕ್ಕಾಗಿ ಹಲವು ಜನರನ್ನು ಭೇಟಿಯಾದರು. ಆದರೆ ಇವರ ಷರತ್ತುಗಳಿಗೆ ಒಪ್ಪಿ ಬಂಡವಾಳ ಹಾಕುವವರು ಯಾರೂ ಸಿಗದೇ ಇದ್ದಾಗ ನಿರಾಶರಾಗಿದ್ದರು.

ಕಾರಂತರ ಸಾಹಿತ್ಯದ ಕೃಷಿ ಬೆಳವಣಿಗೆ ಕಂಡದ್ದೇ ಪುತ್ತೂರಿನಲ್ಲಿ. ಅದುವೇ ಅವರ ಹಲವಾರು ನಾಟಕಗಳಿಗೆ ಪ್ರಯೋಗ ಶಾಲೆಯಾಯಿತು. ಪುತ್ತೂರಿನ ಬಾಲವನ ಕಾರಂತರ ನೆನಪಿಗಾಗಿ ಈಗಲೂ ಸಾಹಿತ್ಯದ ಕೆಲಸಗಳನ್ನು ಮಾಡುತ್ತಾ ಬರುತ್ತಿದೆ. ಪುತ್ತೂರಿನಲ್ಲಿ ಸುಮಾರು ವರ್ಷ, ವರ್ಷಕ್ಕೆ ಆರೇಳು ಹೊಸ ನಾಟಕಗಳನ್ನು ರಂಗಸ್ಥಳಕ್ಕೆ ತಂದಿದ್ದರು. ಮಂಗಳೂರಿನ ಬೆಸೆಂಟ್ ಶಾಲೆಯಲ್ಲೂ ಕೆಲವು ಪ್ರಯೋಗಗಳು ನಡೆದಿದ್ದವು. ಪುತ್ತೂರಿನಲ್ಲಿ ಹಳ್ಳಿಶಾಲೆಗಳ ಉಪಾಧ್ಯಾಯರು ಮತ್ತು ಸ್ಥಳೀಯ ವಿದ್ಯಾರ್ಥಿಗಳು ಭಾಗಿಯಾದರೆ ಮಂಗಳೂರಿನಲ್ಲಿ ವಿದ್ಯಾರ್ಥಿನಿಯರು ಭಾಗವಹಿಸುತ್ತಿದ್ದರು.

ನಾಟಕವೆಂದರೆ ಪ್ರಯೋಗ ಇರಲೇಬೇಕು ಎಂಬ ಬಲವಾದ ನಂಬಿಕೆಯನ್ನು ಹೊತ್ತಿದ್ದವರು ಕಾರಂತರು. ಅದಕ್ಕೆ ಪೂರಕವಾಗಿ ಆ ಹೊತ್ತಿಗೆ ಕಾರಂತರು ಛಾಯಾನಾಟಕಗಳ ಪ್ರಯೋಗವನ್ನು ಕೂಡ ನಡೆಸಿದರು. ಒಂದೇ ತೆರನಾದ ನಾಟಕಗಳು ನೋಡುಗರ ಮನಸ್ಸನ್ನು ಮುಟ್ಟದೆ ಹೋಗಬಹುದು. ಪ್ರೇಕ್ಷಕರ ನಾಡಿ ಮಿಡಿತ ಅರಿತಿದ್ದ ಕಾರಂತರು ಅದಕ್ಕೆ ತಕ್ಕನಾಗಿ ಬದಲಾವಣೆಗಳನ್ನು ರೂಪಿಸುತ್ತಿದ್ದರು. ಅನೇಕ ಬಾರಿ ಅವರಿಗೆ ವಾಸ್ತವಿಕ ನಾಟಕ ಚಿತ್ರಣಕ್ಕಿಂತ ವಾಸ್ತವತೆಯನ್ನು ದಾಟಿಸಬಲ್ಲ ಫ್ಯಾಂಟಸಿಗಳು ಪ್ರಿಯವಾಗಿ ಕಾಣಿಸಿವೆ. ನಾಟಕಕಾರನು ಪ್ರೇಕ್ಷಕರ ಸಂವೇದನೆಗಳನ್ನು ಅರಿತು ರಸಾನುಭವವನ್ನು ನೀಡುತ್ತಿದ್ದ.

**ಗೀತನಾಟಕ:**

ಗೀತನಾಟಕ ಜಗತ್ತಿನ ಪ್ರಮುಖವಾದ ಹೆಸರು ಕಾರಂತರದು. ಜೀವನದ ವೈವಿಧ್ಯಮಯವಾದ ಅನುಭವಗಳಿಗೆ ತಮ್ಮನ್ನು ಒಡ್ಡಿಕೊಳ್ಳುವುದಷ್ಟೇ ಅಲ್ಲದೆ ಹಾಗೆ ಪಡೆದ ಅನುಭವಗಳು, ಅನುಭೂತಿಗಳನ್ನು ಅಭಿವ್ಯಕ್ತಿಸುವ ವಿವಿಧ ಮಾಧ್ಯಮಗಳ ಸಾಧ್ಯತೆಗಳ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನಿಸಿದವರು. ಸಾಹಿತ್ಯ ಕ್ಷೇತ್ರದಲ್ಲಿ ಕಾದಂಬರಿಕಾರರಾಗಿ ಒಂದು ನಿರ್ದಿಷ್ಟ ನೆಲೆಯನ್ನು ಪಡೆದವರು, ಅವರು ನಡೆಸಿದ ರಂಗ ಚಟುವಟಿಕೆಗಳು, ರಂಗಪ್ರಯೋಗಗಳು ಅವರ ಚಾತುರ್ಯತೆಗೆ ಸಾಕ್ಷಿ. ರಂಗ ಪ್ರಯೋಗಶೀಲತೆಯ ಪರಿಣಾಮವಾಗಿ ಅವರಿಂದ ಬಂದ ಗೀತನಾಟಕಗಳು ಕಿಸಾಗೋತಾಮಿ, ಸೋಮಿಯ ಸೌಭಾಗ್ಯ, ಸಾವಿತ್ರಿ–ಸತ್ಯವಾನ್, ಮುಕ್ತದ್ವಾರ, ಬುದ್ಧೋದಯ ಇತ್ಯಾದಿ.

ಕಾರಂತರು ನಿತ್ಯ ಪ್ರಯೋಗಶೀಲರೆ. ಆ ಕಾರಣದಿಂದಲೇ ಅವರೊಳಗಿನ ಕಲಾವಿದ ಹೊಸತನಗಳಿಗೆ ತೆರೆದುಕೊಳ್ಳುತ್ತಿದ್ದ. ಹಾಗಾಗಿ ಅವರ ಗೀತಾನಾಟಕದ ಪರಿಕಲ್ಪನೆಗೆ ಪ್ರೇರಣೆ ಸಿಕ್ಕಿದ್ದು ಅವರ ಸಾಂಸ್ಕೃತಿಕವಾದ ಚೈತನ್ಯವಿರಬಹುದು, ಬೆಳೆದ ಪರಿಸರವೂ ಇರಬಹುದು. 'ಎಳೆತನದಲ್ಲಿ, ಕಂಡಿದ್ದ ಯಕ್ಷಗಾನ ಬಯಲಾಟಗಳ ಅದ್ಭುತರಮ್ಯ ವೇಷ ಭೂಷಣ. ಅಬ್ಬರದ ಆರ್ಭಟನೆಯ ಮಾತು. ಇವುಗಳ ನೆನಪು ಒಂದೆಡೆಯಾದರೆ, ತಮ್ಮೂರಿಗೆ ಆಗಾಗ ಬರುತ್ತಿದ್ದ ಕಂಪೆನಿ ನಾಟಕಗಳಲ್ಲಿನ ಭಾವಪೂರ್ಣವಾದ ಕಥಾನಕಗಳು, ಅಮೋಘ ವಾಗ್ವೈಖರಿ, ನಿರರ್ಗಳವಾಗಿ ಹೊಮ್ಮುತ್ತಿದ್ದ, ಪಾತ್ರಗಳ ಕಂಠ ಸೌಂದರ್ಯ, ಅತಿರಂಜಕ ದೃಶ್ಯ

ಸಂಯೋಜನೆಯ ಮೋಹಕ ಪ್ರಭಾವ ಮತ್ತೊಂದೆಡೆಯಿದ್ದು ರಂಗ ಚಟುವಟಿಕೆಗೆ ಸಂಬಂಧಿಸಿದಂತೆ ವಿಭಿನ್ನ ದೃಷ್ಟಿಕೋನಗಳಿಂದ ವಿಚಾರ ಮಾಡುವ, ತಂತ್ರ, ಶೈಲಿಯ ದೃಷ್ಟಿಯಿಂದ, ಬದಲಾವಣೆಗೆ ಚಿಂತಿಸುವ, ಅವಕಾಶವನ್ನು ಕಲ್ಪಿಸಿಕೊಟ್ಟಿತು.' (ಕಾರಂತರ ಗೀತಾನಾಟಕಗಳು – ಒಂದು ಅಧ್ಯಯನ ಪು. ಸಂ. 339)

ಕಾರಂತರ ಪ್ರಯೋಗಶೀಲತೆಯ ವಿಸ್ತಾರ ಅಗಾಧವಾದದ್ದು. ಒಂದಿಲ್ಲೊಂದು ಪ್ರಯೋಗಗಳಲ್ಲಿ ಲೀಲಾಜಾಲವಾಗಿ ಕಾರ್ಯನಿರ್ವಹಿಸುತ್ತಿದ್ದ ಕಾರಂತರು ಕೆಲವು ಗೀತನಾಟಕಗಳನ್ನು ರಂಗದ ಮೇಲೆ ತಂದರು. ಬೌದ್ಧಯಾತ್ರೆ, ನಾರೀರತ್ನಗಳು ಮುಂತಾದ ಹಲವು ಪ್ರಯೋಗಗಳನ್ನು ನಡೆಸಿದ್ದರು. ಮುಂದೆ ಹಿಮ್ಮೇಳವಿಲ್ಲದೆ ನಟರೇ ನಿರ್ವಹಿಸುವ ಪ್ರಯೋಗವನ್ನೂ ನಡೆಸಿದ್ದರು. 'ಮುಕ್ತದ್ವಾರ' ಅಂತಹ ಒಂದು ಪ್ರಯೋಗ; ಅದರಲ್ಲಿ ಕಾಲಪುರುಷನ ಪಾತ್ರವನ್ನು ಕಾರಂತರೇ ನಿರ್ವಹಿಸಿದ್ದರು. ಕಿಸಾಗೋತಮಿ, ಸಾವಿತ್ರಿ–ಸತ್ಯವಾನ್ ಅದೇ ಬಗೆಯ ನಾಟಕಗಳಾಗಿದ್ದು, ಹೆಚ್ಚಿನ ಗೀತನಾಟಕಗಳಲ್ಲಿ ಹಿಂದುಸ್ತಾನಿ ಸಂಗೀತವನ್ನು ಬಳಸಿಕೊಂಡಿದ್ದರು ಎಂಬುದನ್ನು ಕಾರಂತರು ತಮ್ಮ ಗೀತಾನಾಟಕಗಳು ಕೃತಿಯ ಪ್ರಸ್ತಾವನೆಯಲ್ಲಿ ತಿಳಿಸಿದ್ದಾರೆ.

ನಾಟಕದಲ್ಲಿ ಆಂಗಿಕ ಮತ್ತು ವಾಚಿಕ ಅಭಿನಯಗಳು ಮುಖ್ಯವಾದರೆ ಗೀತಾನಾಟಕದಲ್ಲಿ ಆಂಗಿಕ ಅಭಿನಯ ಹಾಗೂ ಸಂಗೀತಕ್ಕೆ ಮುಖ್ಯ ಪ್ರಾಶಸ್ತ್ಯ. ಹಾಗಾಗಿ ಕಾರಂತರು ತಮ್ಮ ತಲೆಯಲ್ಲಿದ್ದ ಕಲ್ಪನೆಗೆ ಮಾತಿಲ್ಲದೆ ನಾದದಿಂದಲೇ ರೂಪ ಕೊಡುವ ಒಂದು ಪ್ರಯೋಗವನ್ನು ನಡೆಸಿದರು. ಅದರ ಅನಿರ್ದಿಷ್ಟ ನಾದಲಹರಿಗೆ ಸಂಗೀತಗಾರರಿಂದ ಸ್ವರ ಪ್ರಸ್ತಾರ ಹಾಕಿಸಿಕೊಂಡರು. ಇಂತಹ ಪ್ರಯೋಗಗಳಲ್ಲಿ ವಾಸುದೇವ ನಾಯಕ್, ಎ.ವಿ. ಕೃಷ್ಣಮಾಚಾರ್ ಹಾಗೂ ಮಂಗಳೂರಿನ ಶ್ರೀನಿವಾಸ ಉಡುಪರ ಸಹಕಾರವನ್ನು ಪಡೆದುಕೊಂಡರು. ಕಾರಂತರ ಗೀತಾನಾಟಕದಲ್ಲಿ ದುರಂತಕಥೆಯ 'ಸೋಮಿಯ ಸೌಭಾಗ್ಯ', ಗಾಳಿಸುದ್ದಿಗೆ ಸಂಬಂಧಿಸಿದ 'ಯಾರೋ ಅಂದರು' ಸಾಕಷ್ಟು ಜನಪ್ರಿಯವಾದವು. ಜಾನಪದದ ಹಾಡುಗಳಿಗೆ ಜೀವ ತುಂಬಿಸಿ ಅದನ್ನು 'ಸೋಮಿಯ ಸೌಭಾಗ್ಯ'ದಲ್ಲಿ ಪ್ರಯೋಗಕ್ಕೂ ತಂದರು. ಪುತ್ತೂರಿನ ಪರಿಸರ ಅವರ ಜಾನಪದದ ಬಗೆಗಿನ ಒಲವಿಗೆ ಇನ್ನಷ್ಟು ಪ್ರೋತ್ಸಾಹ ಕೊಟ್ಟಿತು. ಕಾರಂತರೇ ಹೇಳುವಂತೆ, ಅವರಿಗೆ ತುಂಬ ತೃಪ್ತಿಕೊಟ್ಟ ಒಂದು ಮಾಧ್ಯಮ ಈ ಗೀತನಾಟಕ ಮಾಧ್ಯಮ.

**ನೃತ್ಯನಾಟಕ:**

ನೃತ್ಯನಾಟಕಗಳು ಶಿವರಾಮ ಕಾರಂತರ ರಂಗಪ್ರಯೋಗದ ಇನ್ನೊಂದು ಆವಿಷ್ಕಾರ. ಕಾರಂತರೇ ಹೇಳುವಂತೆ 'ಯಾವುದೇ ಪಾತ್ರದ ಕಲ್ಪನೆ ಅಥವಾ ಆ ಪಾತ್ರವು ತೊಡಬೇಕಾದ ಭಾವಾವೇಶವು ಮನಸ್ಸಿಗೆ ಬಂದರೆ ಅದನ್ನು ಬೇಕೆಂಬ ಹೊತ್ತಿಗೆ ಆವಿಷ್ಕರಿಸಿ ತನ್ಮಯನಾಗಬಲ್ಲ ಒಂದು ಸ್ವಭಾವ ನನಗೆ ಮೊದಲಿನಿಂದಲೂ ಬಂದಿತ್ತು. ಕ್ಷಣಕಾಲಕ್ಕೆ ನಾನು ಕಲ್ಪಿಸಿಕೊಂಡ ವೀರನೂ ಆಗಬಲ್ಲೆ, ಭೀರನೂ ಆಗಬಲ್ಲೆ. ಈ ಪ್ರಸಂಗಗಳಲ್ಲಿ ನನಗೆ ಕಾಣಿಸಿದ ಇನ್ನೊಂದು ಪ್ರಧಾನ ಅಂಶವೆಂದರೆ, ನೃತ್ಯವೆಂಬುದು ಕೇವಲ ಹೆಜ್ಜೆಯ ಬಡಿತಕ್ಕೆ, ಪದಗತಿಗೆ ಸೀಮಿತವಲ್ಲ ಎಂಬುದು; ಅದು ಚಿಕ್ಕ ಮಗು ತನ್ನ ಭಾವನೆಗಳನ್ನು ಪ್ರಕಟಿಸುವಂತೆ. ಬಿಡಿ ವಿಷಯಗಳ ಮೇಲೆ ನನ್ನದೇ ನೃತ್ಯ ರಚನೆ ಮಾಡಿದೆ – ನದಿ, ಜೇನ್ನೊಣ, ಹೂವು, ಹಾವು, ಹಾವಾಡಿಗ, ಉಯ್ಯಾಲೆ ಇತ್ಯಾದಿ. ಅವುಗಳನ್ನು ಬಿಂಬಿಸಲು ಹಿಂದುಸ್ತಾನಿ ರಾಗತಾಳಗಳ ಮೊರೆಹೊಕ್ಕು ಪ್ರಯೋಗ ನಡೆಸಿದೆ'' (ಹೆಚ್. ಭಟ್ ಮಂಜುನಾಥ್ – ಅನುಭವದೊಂದಿಗೆ ಪ್ರಯೋಗ: ಡಾ. ಕೆ ಶಿವರಾಮ ಕಾರಂತ) ಉತ್ಥಾನ ಎಂದು ವಿವರಿಸಿದ್ದಾರೆ.

ರಂಗದ ಮೇಲೆ ವಿಷಯಾಭಿವ್ಯಕ್ತಿಗೊಳಿಸಲು ರಾಗ, ತಾಳ, ಲಯಗಳ ಮೂಲಕ ಪ್ರದರ್ಶಿಸಲು ನೃತ್ಯ ನಾಟಕಗಳು ಪ್ರೇರಕವಾದಂತೆ ತೋರುತ್ತದೆ. ನೃತ್ಯ ಮಾಧ್ಯಮವನ್ನು ಏತಕ್ಕೆ ಒಂದು ನಾಟಕರೂಪದಲ್ಲಿ ಬಳಸಬಾರದು ಎಂಬ ಉತ್ಸಾಹ ಉಂಟಾಗಿ ಅಲ್ಲಿಂದ ಮುಂದೆ ಕೆಲವು ವರ್ಷ ಅಂತಹ ನೃತ್ಯನಾಟಕಗಳನ್ನು ಮಾಡಿದರು. 'ಶುಭದತ್ತ', 'ಆಲಿಬಾಬಾ ಮತ್ತು 40 ಕಳ್ಳರು', 'ಅಲ್ಲಾವುದ್ದೀನನ ಅದ್ಭುತ ದೀಪ', 'ಹಸನ್–ಪರ್ವಿನಾ' ಇತ್ಯಾದಿ ನೃತ್ಯ ನಾಟಕಗಳು ಕಾರಂತರ ರಂಗಪ್ರಯೋಗದ ಬತ್ತಳಿಕೆಯಿಂದ ಬಂದವುಗಳು.

**ಯಕ್ಷಗಾನ:**

ಯಕ್ಷಗಾನ ಎಂದರೆ ಕಾರಂತರು; ಕಾರಂತರೆಂದರೆ ಯಕ್ಷಗಾನ ಎನ್ನುವಷ್ಟರ ಮಟ್ಟಿಗಿನ ಪ್ರಸಿದ್ಧಿ ಅವರದಾಗಿದೆ. ಆದರೆ ಇದನ್ನು ಅವರು ತಲುಪಬೇಕಾದರೆ ಅದಕ್ಕೆ ಬೇಕಾದಷ್ಟು ಪೂರ್ವ ಸಿದ್ಧತೆಗಳು ನಡೆದದ್ದು, ನಾಟಕ, ಗೀತ ನಾಟಕ, ನೃತ್ಯ ನಾಟಕ ಪ್ರಯೋಗಗಳ ರೂಪದಲ್ಲಿ. ಯಕ್ಷಗಾನದ ತವರೆನಿಸಿದ ಕರಾವಳಿಯಲ್ಲೇ ಹುಟ್ಟಿದ ಕಾರಂತರಿಗೆ ಯಕ್ಷಗಾನ ಉಳಿದ ರಂಗಗಳಿಗಿಂತ ತಡವಾಗಿ ಪ್ರವೇಶಿಸಿತು ಎನ್ನಬಹುದು. ಯಾಕೆಂದರೆ ಅವರ ಪ್ರೌಢಶಾಲಾ ದಿನಗಳಿಂದ ಆರಂಭಿಸಿ ಪುತ್ತೂರಿನಲ್ಲಿ ಸಾಕಷ್ಟು ಕಾಲ ಕಳೆಯುವವರೆಗೂ ಯಕ್ಷಗಾನಕ್ಕೆ ಅವರ ಬಳಿ ಆದ್ಯತೆ ಇರಲಿಲ್ಲ. ಪುತ್ತೂರಿನಲ್ಲಿ ದಸರೆಯ ಕಾರ್ಯಕ್ರಮಗಳನ್ನು ಆಯೋಜಿಸುವಾಗ ಯಕ್ಷಗಾನವನ್ನು ಒಂದು ದಿನ ಪ್ರದರ್ಶಿಸಿದರು. ತೆಂಕುತಿಟ್ಟು ಶೈಲಿಯ ಯಕ್ಷಗಾನದ ಮೂಲಕ ತಾವೂ ಬಣ್ಣ ಹಚ್ಚಿ ಕುಣಿದಿದ್ದರು. ಯಕ್ಷಗಾನವೆಂದರೆ ಅಪಾರವಾದ ವ್ಯಾಮೋಹ ಅವರಲ್ಲಿತ್ತು.

ಕಾರಂತರು ಯಕ್ಷಗಾನದಲ್ಲಿ ತಮ್ಮನ್ನು ಪೂರ್ತಿ ತೊಡಗಿಸಿಕೊಂಡು 1958ರಲ್ಲಿ ದೆಹಲಿಯಲ್ಲಿ ನಡೆದ ಭಾರತೀಯ ನೃತ್ಯಗಳ ವಿಚಾರಗೋಷ್ಠಿಯಲ್ಲಿ ಮೂವರು ಕಲಾವಿದರೊಂದಿಗೆ ಯಕ್ಷಗಾನವನ್ನು ಪ್ರತಿನಿಧಿಸಿದರು. ಅದೇ ವರ್ಷ ಬ್ರಹ್ಮಾವರದಲ್ಲಿ ಸ್ಥಳೀಯರ ಸಹಕಾರದೊಂದಿಗೆ ಪ್ರಥಮ ಯಕ್ಷಗಾನ ಸಮ್ಮೇಳನವನ್ನು ಸಂಘಟಿಸಿದರು. ಸ್ವತಃ ತಾವೇ ಗೆಜ್ಜೆ ಕಟ್ಟಿ ರಂಗದಲ್ಲಿ ಕುಣಿದವರು. ಅವರು "ಯಕ್ಷರಂಗ" ಪರಿಕಲ್ಪನೆಯ ಮೂಲಕ ಯಕ್ಷಗಾನವನ್ನು ಕೇವಲ ಜನಪದ ಕಲೆಯಾಗಿ ನೋಡುವ ಬದಲು, ಅದನ್ನು ಸಮಕಾಲೀನ ರಂಗಭೂಮಿಯ ಸಾಧ್ಯತೆಗಳೊಂದಿಗೆ ಬೆಸೆಯುವ ಪ್ರಯತ್ನವನ್ನು ಅವರು ನಡೆಸಿದರು.

**ಕಾರಂತರ ರಂಗಪ್ರಯೋಗಗಳ ವೈಶಿಷ್ಟ್ಯ :**

ಕಾರಂತರ ರಂಗಪ್ರಯೋಗಗಳನ್ನು ಗಮನಿಸಿದಾಗ ಕೆಲವು ಮುಖ್ಯ ಲಕ್ಷಣಗಳು ಸ್ಪಷ್ಟವಾಗುತ್ತವೆ. ಅವರು ಯಾವುದೇ ಕಲಾಪ್ರಕಾರವನ್ನು ಸ್ಥಿರವಾದ ರೂಪದಲ್ಲಿ ಸ್ವೀಕರಿಸಲಿಲ್ಲ. ಅದರ ಮೂಲ ಸ್ವರೂಪವನ್ನು ಗೌರವಿಸುತ್ತಲೇ ಹೊಸ ಸಾಧ್ಯತೆಗಳನ್ನು ಹುಡುಕಿದರು. ನಾಟಕದಲ್ಲಿ ಸಂಗೀತ, ಗೀತನಾಟಕದಲ್ಲಿ ಅಭಿನಯ, ನೃತ್ಯನಾಟಕದಲ್ಲಿ ದೇಹಾಭಿವ್ಯಕ್ತಿ ಮತ್ತು ಯಕ್ಷಗಾನದಲ್ಲಿ ಆಧುನಿಕ ರಂಗತಂತ್ರಗಳ ಬಳಕೆಯ ಮೂಲಕ ಕಲಾಪ್ರಕಾರಗಳ ನಡುವಿನ ಗಡಿಗಳನ್ನು ಅವರು ಸಡಿಲಗೊಳಿಸಿದರು. ಕಾರಂತರ ಪ್ರಯೋಗಗಳು ಕೇವಲ ತಾಂತ್ರಿಕ ಬದಲಾವಣೆಗಳಾಗಿರಲಿಲ್ಲ. ಅವುಗಳ ಹಿಂದೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಿಂತನೆಯೂ ಇತ್ತು.

**ಉಪಸಂಹಾರ:**

ಶಿವರಾಮ ಕಾರಂತರ ರಂಗಪ್ರಯೋಗಗಳು ಕನ್ನಡ ರಂಗಭೂಮಿಯ ಇತಿಹಾಸದಲ್ಲಿ ಮಹತ್ವದ ತಿರುವನ್ನು ಪಡೆದವು ಎಂದರೆ ತಪ್ಪಾಗಲಾರದು. ನಾಟಕವನ್ನು ಕೇವಲ ಓದುವ

ಸಾಹಿತ್ಯಕೃತಿಯೆಂಬ ಸೀಮಿತ ದೃಷ್ಟಿಯಿಂದ ಹೊರತಂದು, ಅದನ್ನು ಅಭಿನಯ, ಸಂಗೀತ, ನೃತ್ಯ, ದೃಶ್ಯ ಮತ್ತು ಪ್ರೇಕ್ಷಕರ ಸಹಭಾಗಿತ್ವದ ಮೂಲಕ ಜೀವಂತ ಕಲೆಯಾಗಿ ಗ್ರಹಿಸಲು ಅವರು ಪ್ರಯತ್ನಿಸಿದರು. ಗದ್ಯನಾಟಕದಿಂದ ಗೀತನಾಟಕಕ್ಕೆ, ಅಲ್ಲಿಂದ ನೃತ್ಯನಾಟಕಕ್ಕೆ ಮತ್ತು ಮುಂದೆ ಯಕ್ಷಗಾನದ ವಿಶಾಲ ಕ್ಷೇತ್ರಕ್ಕೆ ಅವರು ನಡೆಸಿದ ಪ್ರಯೋಗಗಳು ಅವರ ಸೃಜನಶೀಲ ವ್ಯಾಪ್ತಿಯನ್ನು ತೋರಿಸುತ್ತವೆ.

ಹೀಗಾಗಿ ಕಾರಂತರ ರಂಗಪ್ರಯೋಗಗಳನ್ನು ಕನ್ನಡ ರಂಗಭೂಮಿಯ ಆಧುನೀಕರಣದ ಒಂದು ಪ್ರಮುಖ ಹಂತವೆಂದು ಗುರುತಿಸಬಹುದು. ಅವರ ಪ್ರಯೋಗಗಳು ಒಂದು ಕಾಲಘಟ್ಟಕ್ಕೆ ಮಾತ್ರ ಸೀಮಿತವಾಗದೆ, ಇಂದಿನ ರಂಗಕರ್ಮಿಗಳಿಗೂ ಹೊಸ ಸಾಧ್ಯತೆಗಳನ್ನು ಹುಡುಕುವ ಪ್ರೇರಣೆಯನ್ನು ನೀಡಿದೆ. ಕನ್ನಡ ರಂಗಭೂಮಿಯ ಪರಂಪರೆ, ಪ್ರಯೋಗಶೀಲತೆ ಮತ್ತು ಸಮಕಾಲೀನತೆಯನ್ನು ಒಂದೇ ಚೌಕಟ್ಟಿನಲ್ಲಿ ಅರ್ಥಮಾಡಿಕೊಳ್ಳಲು ಕಾರಂತರ ರಂಗಪ್ರಯೋಗವನ್ನು ನಾವು ಅಧ್ಯಯನಕ್ಕೆ ಒಳಪಡಿಸಬಹುದಾಗಿದೆ.

**ಪರಾಮರ್ಶನ ಗ್ರಂಥಗಳು:**

1. ಶಿವರಾಮ ಕಾರಂತ ಕೆ., (2015), ಯಕ್ಷಗಾನ ಬಯಲಾಟ, ಬೆಂಗಳೂರು: ರವೀಂದ್ರ ಪುಸ್ತಕಾಲಯ.
2. ಶಿವರಾಮ ಕಾರಂತ ಕೆ., (2014), ಹುಚ್ಚು ಮನಸ್ಸಿನ ಹತ್ತು ಮುಖಗಳು, ಬೆಂಗಳೂರು: ಸ್ವಪ್ನ ಬುಕ್ ಹೌಸ್.
3. ಶಿವರಾಮ ಕಾರಂತ ಕೆ., (1968), ಗೀತಾನಾಟಕಗಳು, ಪುತ್ತೂರು: ಹರ್ಷ ಮುದ್ರಣ ಪ್ರಕಾಶನಾಲಯ.
4. ಶಿವರಾಮ ಕಾರಂತ ಕೆ.,(2015), ಯಕ್ಷಗಾನ, ಶಿವಮೊಗ್ಗ: ರವೀಂದ್ರ ಪುಸ್ತಕಾಲಯ.
5. ಮಂಜುನಾಥ್ ಹೆಚ್. ಭಟ್, (2022), ಅನುಭವದೊಂದಿಗೆ ಪ್ರಯೋಗ: ಡಾ. ಕೆ. ಶಿವರಾಮ ಕಾರಂತ, ಬೆಂಗಳೂರು: ಉತ್ಥಾನ (ರಾಷ್ಟ್ರೋತ್ಥಾನ ಸಾಹಿತ್ಯ ).
6. ವಿಜಯಾ ಸುಬ್ಬರಾಜ್, (1995), ಕನ್ನಡ ಗೀತನಾಟಕಗಳ ಅಧ್ಯಯನ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.